2 ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರವರ ನ್ಯಾಯಾಲಯದಲ್ಲಿ,
ಚಿಕ್ಕಮಗಳೂರು

<u>ಸತ್ರ ಮೊಕದ್ದಮೆ ನಂಃ 34-2024</u>

| | | | |
|---|---|---|---|
| ಸಾಕ್ಷಿದಾರರ ಹೆಸರು | - ತಂಗವೇಲು | | ಪಿಡಬ್ಲೂ - 05 |
| ತಂದೆಯ ಹೆಸರು | - ಧರ್ಮಲಿಂಗಂ | | ಸಿಡಬ್ಲೂ - 08 |
| ವಯಸ್ಸು | - 25 ವರ್ಷ | | |
| ಉದ್ಯೋಗ | - ಫಿಲ್ಡ್ ಆಫೀಸರ್, ಟಾಟಾ ಕಾಫಿ ಎಸ್ಟೇಟ್ ಗಬ್ಗಲ್ | | |
| ವಾಸ ಸ್ಥಳ | - ಮೂಡಿಗೆರೆ | | |

ದಿನಾಂಕಃ **11.03.2025** ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.

<u>ಮುಖ್ಯ ವಿಚಾರಣೆ : ಸರ್ಕಾರಿ ಅಭಿಯೋಜಕರಿಂದ-</u>

1. ಆರೋಪಿತರು ಗೊತ್ತು. ಸಾಕ್ಷಿ ಆರೋಪಿತರನ್ನು ವಿಸಿ ಮೂಲಕ ನೋಡಿ ಗುರುತಿಸಿದ್ದಾರೆ.
2. ಮೃತ ಶಿವಕುಮಾರನನ್ನು ನೋಡಿದ್ದೇನೆ. ಚಾಸಾ.1 ನಮ್ಮ ಕಾಫಿ ಎಸ್ಟೇಟಿನ ಮ್ಯಾನೇಜರ್. ಚಾಸಾ.2 ಮತ್ತು 3 ನನ್ನ ಸಹೋದ್ಯೋಗಿಗಳು. ಚಾಸಾ.4 ರಿಂದ 7 ನಮ್ಮ ಎಸ್ಟೇಟಿನ ಕೂಲಿಯಾಳುಗಳು.
3. ಕಳೆದ ಐದು ವರ್ಷಗಳಿಂದ ನಾನು ಟಾಟಾ ಎಸ್ಟೇಟಿನಲ್ಲಿ ಅಸಿಸ್ಟೆಂಟ್ ಪೀಲ್ಡ್ ಆಫೀಸರ್ ಆಗಿ ಕೆಲಸ ಮಾಡುತ್ತಿದ್ದೇನೆ.
4. ಆರೋಪಿತರು ಈ ಪ್ರಕರಣದ ಘಟನೆ ನಡೆಯುವ ಆರು ತಿಂಗಳ ಹಿಂದಿನಿಂದಲೂ ನಮ್ಮ ಎಸ್ಟೇಟಿನಲ್ಲಿ ಕೂಲಿ ಕೆಲಸ ಮಾಡಿಕೊಂಡಿದ್ದರು. ನಮ್ಮ ಎಸ್ಟೇಟಿನಲ್ಲಿ ಅಸ್ಸಾಂ ಜಾರ್ಕಂಡ್ ಮೂಲದ ಕೂಲಿಯಾಳುಗಳ ಇದ್ದಾರೆ. ಆರೋಪಿತರು ಜಾರ್ಕಂಡ್ ಮೂಲದವರು.

5. ಆರೋಪಿತರು ಕೂಲಿ ಕೆಲಸ ಮಾಡಿಕೊಂಡಿದ್ದರು. 2 ನೇ ಆರೋಪಿ ಕೂಲಿಯಾಳುಗಳ ಮಕ್ಕಳನ್ನು ನೋಡಿಕೊಳ್ಳುತ್ತಿದ್ದಳು. ಮೃತ ಶಿವಕುಮಾರ 2 ನೇ ಆರೋಪಿಯ ಮಗ.

6. ದಿಃ 18.12.2023 ರಂದು ಎಸ್ಟೇಟಿನಲ್ಲಿ ಕೆಲಸ ಮಾಡುತ್ತಿದ್ದಾಗ ಮಧ್ಯಾಹ್ನ 3.00 ಗಂಟೆ ಸಮಯಕ್ಕೆ ಚಾಸಾ.5 ರವರು ಕರೆ ಮಾಡಿ ಶಿವಕುಮಾರ ಪ್ರಜ್ಞೆ ತಪ್ಪಿ ಬಿದ್ದಿದ್ದಾನೆ ಆಸ್ಪತ್ರೆಗೆ ಕರೆದುಕೊಂಡು ಹೋಗಬೇಕು ಎಂದು ಹೇಳಿದಳು. ನಾನು ಸದರಿ ಮಗು ಪ್ರಜ್ಞೆ ತಪ್ಪಿ ಬಿದ್ದ ಕೂಲಿ ಲೈನಿಗೆ ಹೋದೆ. ಆ ಸಮಯದಲ್ಲಿ 1 ನೇ ಆರೋಪಿ ಮೃತ ಶಿವಕುಮಾರನನ್ನು ಹೆಗಲ ಮೇಲೆ ಹಾಕಿಕೊಂಡು ನಿಂತಿದ್ದ.

7. ನಾನು ಈ ವಿಚಾರವನ್ನು ಚಾಸಾ.2 ಮತ್ತು 3 ರವರಿಗೆ ತಿಳಿಸಿದೆ. ಚಾಸಾ.2 ಮತ್ತು 3 ರವರು ಶಿವಕುಮಾರನನ್ನು ಒಂದು ವಾಹನದಲ್ಲಿ ನಿಡುವಾಳೆ ಆಸ್ಪತ್ರೆಗೆ ಕರೆದುಕೊಂಡು ಹೋದರು. ನಂತರ ಚಾಸಾ.1 ರವರು ಕೂಲಿ ಲೈನಿಗೆ ಬಂದರು. ನಾನು ಅವರಿಗೆ ನಡೆದ ವಿಚಾರ ತಿಳಿಸಿದೆ.

8. ನಂತರ ನಾನು ಚಾಸಾ.5 ರವರನ್ನು ವಿಚಾರಿಸಿದಾಗ, ಆರೋಪಿತರು ಮಧ್ಯಾಹ್ನ 1.45 ಗಂಟೆಯಿಂದಲೂ ಶಿವಕುಮಾರನನ್ನು ಹುಡುಕುತ್ತಿದ್ದರು ಎಂದು ಹೇಳಿದರು. ಚಾಸಾ.5 ರವರನ್ನು ಮಗುವಿನ ಬಗ್ಗೆ ವಿಚಾರಿಸಿದಾಗ ಚಾಸಾ.5 ನನಗೆ ಗೊತ್ತಿಲ್ಲ ಎಂದು ತಿಳಿಸಿರುವುದಾಗಿ ನನಗೆ ಹೇಳಿದಳು. ಇದಾದ ಸ್ವಲ್ಪ ಸಮಯದಲ್ಲಿ 1 ನೇ ಆರೋಪಿ ದಿನೇಶ ಮಗುವನ್ನು ತೋಟದ ಕಡೆಯಿಂದ ಎತ್ತಿಕೊಂಡು ಬಂದ ತಿಳಿಸಿದಳು. ಮಗು ಎತ್ತಿಕೊಂಡು ಬರುವ ಸಮಯದಲ್ಲಿ ಮಲಮೂತ್ರ ವಿಸರ್ಜನೆ ಮಾಡಿಕೊಂಡಿರುವುದಾಗಿ ತಿಳಿಸಿದಳು.

ಮಗುವನ್ನು 2 ನೇ ಆರೋಪಿ ಸ್ವಚ್ಛ ಗೋಳಿಸಿ ಬಟ್ಟೆ ಬದಲಾಯಿಸಿದ್ದಾಗಿ ತಿಳಿಸಿದಳು. ನಿಡುವಾಳೆ ಆಸ್ಪತ್ರೆಯಲ್ಲಿ ವೈದ್ಯರು ಇಲ್ಲ ಎಂದು ತಿಳಿದುಬಂತು. ನಂತರ ನಾನು ಮತ್ತು ಮಾನೇಜರ್ ಬಳಸುವ ಜೀಪನ್ನು ಕೊಟ್ಟು ಮಗು ಶಿವಕುಮಾರರನ್ನು ಮೂಡಿಗೆರೆ ಆಸ್ಪತ್ರೆಗೆ ಕರೆದುಕೊಂಡು ಹೋದರು.

9. ನಂತರ ಮಗು ಮರಣಹೊಂದಿದೆ ಎಂದು ಚಾಸಾ.1 ರವರು ನನಗೆ ತಿಳಿಸಿದರು. ನಾನು ನೋಡಿದಾಗ ಶಿವಕುಮಾರ ಮಾತನಾಡುವ ಸ್ಥಿತಿಯಲ್ಲಿರಲಿಲ್ಲ. ಮೃತ ಮಗುವಿನ ಭಾವಚಿತ್ರ ಈಗ ನೋಡುತ್ತಿದ್ದು ಅದನ್ನು ನಿಪಿ.7 ಮತ್ತು 8 ಎಂದು ಗುರುತಿಸಲಾಗಿದೆ. ಪೋಲೀಸರು ತನಿಖೆಯಿಂದ 1 ನೇ ಆರೋಪಿ ಮಗುವಿನ ಕತ್ತು ಹಿಚುಕಿ ಸಾಯಿಸಿದ್ದಾನೆ ಎಂದು ತಿಳಿದುಬಂತು.

10. ಮೃತ ಶಿವಕುಮಾರ 1 ನೇ ಆರೋಪಿಯ ಮಗುವಲ್ಲ, 2 ನೇ ಆರೋಪಿಯ ಮೊದಲ ಗಂಡನ ಮಗು ಎಂದು ಮೇಲೆ ಹೇಳಿದ ಕೃತ್ಯ ಎಸಗಿದ್ದಾನೆ ಎಂದು ತಿಳಿದುಬಂತು. ಈ ಬಗ್ಗೆ ನಾನು ಪೋಲೀಸರಲ್ಲಿ ತನಿಖೆ ಕಾಲದಲ್ಲಿ ಹೇಳಿಕೆ ನೀಡಿದ್ದೇನೆ.

<u>ಪಾಟೀ ಸವಾಲು: ಶ್ರೀ.ಎನ್.ಡಿ., ವಕೀಲರಿಂದ ಆರೋಪಿ ಪರವಾಗಿಃ</u>

11. ನಮ್ಮ ಎಸ್ಟೇಟಿನಲ್ಲಿ ಸುಮಾರು 250 ಕೂಲಿಕಾರ್ಮಿಕರು ಕೆಲಸ ಮಾಡುತ್ತಾರೆ. ಸ್ಥಳೀಯ ಕೂಲಿಯಾಳುಗಳು ಕೂಡ ನಮ್ಮ ಎಸ್ಟೇಟಿಗೆ ಕೆಲಸಕ್ಕೆ ಬರುತ್ತಾರೆ. ಬೇರೆ ರಾಜ್ಯದಿಂದ ಬಂದವರಿಗೆ ನಮ್ಮ ಎಸ್ಟೇಟಿನಲ್ಲಿ ವಾಸದ ವ್ಯವಸ್ಥೆ ಇದೆ.

12. ನಮ್ಮ ಎಸ್ಟೇಟಿನಲ್ಲಿ ಒಟ್ಟು 10 ಕೂಲಿ ಲೈನುಗಳಿದ್ದು, ಪ್ರತಿ ಲೈನಿನಲ್ಲಿ ಐದು ಮನೆ ಇದೆ. ಕೂಲಿಯಾಳುಗಳು ಸಣ್ಣಪುಟ್ಟ ವಿಚಾರಗಳಿಗೆ ಕಿತ್ತಾಡುತ್ತಾರೆ ಎಂದರೆ ನನಗೆ ಗೊತ್ತಿಲ್ಲ. ಕೂಲಿಯಾಳುಗಳು ಸಣ್ಣಪುಟ್ಟ ವಿಚಾರಗಳಿಗೆ ಕಿತ್ತಾಡುವ ವಿಚಾರ ಗೊತ್ತಿದ್ದರೂ ಸಹ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

13. ಜಾರ್ಕಂಡಿನಿಂದ ಬಂದ ಕೂಲಿಯಾಳುಗಳು ನಮ್ಮ ಎಸ್ಟೇಟಿನಲ್ಲಿ ಸುಮಾರು 50 ಜನ ಇದ್ದು, ಅವರು ಕೂಲಿ ಲೈನಿನಲ್ಲಿ ವಾಸವಿದ್ದಾರೆ. ಅವರೆಲ್ಲರ ಹೆಸರು ಹೇಳಲಾರೆ.

14. ನಮ್ಮ ಎಸ್ಟೇಟಿನಲ್ಲಿ ಕೂಲಿಕಾರ್ಮಿಕರು ಸತ್ತರೆ ಪರಿಹಾರ ನೀಡಲಾಗುತ್ತದೆ ಎಂದರೆ ಸರಿಯಲ್ಲ. ಕೂಲಿಕಾರ್ಮಿಕರು ಸತ್ತರೆ ಪರಿಹಾರ ನೀಡಲಾಗುತ್ತದೆ ಎಂಬ ವಿಚಾರ ಗೊತ್ತಿದ್ದರು ಸಹ ಗೊತ್ತಿಲ್ಲ ಎಂದು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

15. ನಮ್ಮ ಎಸ್ಟೇಟಿನಲ್ಲಿ ಕಾರ್ಮಿಕರ ಜನಸಂದಣಿ ಇರುತ್ತದೆ. ನಮ್ಮ ಎಸ್ಟೇಟಿನ ಮಧ್ಯೆ ರಾಜ್ಯ ಹೆದ್ದಾರಿ ಎಸ್.ಹೆಚ್.66 ಹಾದುಹೋಗಿದೆ ಎಂದರೆ ನಿಜ. ರಾಜ್ಯ ಹೆದ್ದಾರಿಯಲ್ಲಿ ಜನರು ಒಡಾಡುತ್ತಾರೆ ಮತ್ತು ವಾಹನಗಳ ಒಡಾಟ ಇರುತ್ತದೆ.

16. ದಿಃ 18.12.2023 ರಂದು ನಾನು ಕೂಲಿಲೈನಿಗೆ ಹೋದ ಸಮಯದಲ್ಲಿ ಪೋಲೀಸರಿಗೆ ಮಾಹಿತಿ ನೀಡಲು ನನಗೆ ತೊಂದರೆ ಇರಲಿಲ್ಲ. ನಾನು ಎಸ್ಟೇಟಿನಲ್ಲಿ ಕೆಲಸ ಮಾಡುವ ಕೂಲಿಯಾಳುಗಳ ಬಾಬ್ತು ದಾಖಲೆಯನ್ನು ನಮ್ಮ ಆಡಳಿತ ವಿಭಾಗ ನೀಡಿದೆ. ನಾನು ಎಸ್ಟೇಟಿನಲ್ಲಿ ಪೀಲ್ಡ ಆಫೀಸರ್ ಆಗಿರುವ ಬಗ್ಗೆ ಪೋಲೀಸರಿಗೆ ದಾಖಲೆ ನೀಡಿಲ್ಲ.

17. ನಾನು ಆರೋಪಿತರನ್ನು ನ್ಯಾಯಾಲಯದಲ್ಲಿ ಮೊದಲ ಬಾರಿಗೆ ನೋಡುತ್ತಿದ್ದೇನೆ ಎಂದರೆ ಸರಿಯಲ್ಲ. ನಾನು ಇದ್ದ

ಸ್ಥಳದಿಂದ ಕೂಲಿಲೈನು ಸುಮಾರು 3-4 ಕಿಮೀ ದೂರ ಇತ್ತು. ಚಾಸಾ.5 ರವರ ಮೊಬೈಲು ನಂಬರು ನನಗೆ ನೆನಪಿಲ್ಲ. ನಾನು ನೋಡಿದ ಸಮಯದಲ್ಲಿ 1 ನೇ ಆರೋಪಿ ಮೃತ ಶಿವಕುಮಾರನನ್ನು ಎತ್ತಿಕೊಂಡಿದ್ದ ಎಂದು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

18. ನಾನು ಎಸ್ಟೇಟಿನಲ್ಲಿ ಚಾಸಾ.1 ರವರು ಹೇಳಿದ ಕೆಲಸ ಮಾಡುತ್ತೇನೆ. ಮೃತನ ಬಾಬ್ತು ಪರಿಹಾರ ನೀಡುವುದರಿಂದ ತಪ್ಪಿಸಿಕೊಳ್ಳಲು ಚಾಸಾ.1 ರವರ ಮಾತಿನ ಮೇರೆಗೆ ಕಂಪನಿಗೆ ಸಹಾಯ ಮಾಡಲು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

19. ಚಾಸಾ.5 ರವರು ನನಗೆ ನೀಡಿದ ಮಾಹಿತಿಯ ಮೇರೆಗೆ ನನ್ನ ಮುಖ್ಯವಿಚಾರಣೆ ಸಾಕ್ಷ್ಯ ನುಡಿದಿದ್ದೇನೆ. ನನಗೆ ಈ ಪ್ರಕರಣದಲ್ಲಿ ಮಾಹಿತಿ ಇಲ್ಲ ಎಂದರೆ ನಿಜ.

20.

21. ದಿಃ 18.12.2023 ರಂದು ಎಸ್ಟೇಟಿನಲ್ಲಿ ಕೆಲಸ ಮಾಡುತ್ತಿದ್ದಾಗ ಮದ್ಯಾಹ್ನ 3.00 ಗಂಟೆ ಸಮಯಕ್ಕೆ ಚಾಸಾ.5 ರವರು ಕರೆ ಮಾಡಿ ಶಿವಕುಮಾರ ಪ್ರಜ್ಞೆ ತಪ್ಪಿ ಬಿದ್ದಿದ್ದಾನೆ ಆಸ್ಪತ್ರೆಗೆ ಕರೆದುಕೊಂಡು ಹೋಗಬೇಕು ಎಂದು ಹೇಳಿದಳು, ನಾನು ಸದರಿ ಮಗು ಪ್ರಜ್ಞೆ ತಪ್ಪಿ ಬಿದ್ದ ಕೂಲಿ ಲೈನಿಗೆ ಹೋದೆ. ಆ ಸಮಯದಲ್ಲಿ 1 ನೇ ಆರೋಪಿ ಮೃತ ಶಿವಕುಮಾರನನ್ನು ಹೆಗಲ ಮೇಲೆ ಹಾಕಿಕೊಂಡು ನಿಂತಿದ್ದ ಎಂದು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

22. ನಾನು ಈ ವಿಚಾರವನ್ನು ಚಾಸಾ.2 ಮತ್ತು 3 ರವರಿಗೆ ತಿಳಿಸಿದೆ. ಚಾಸಾ.2 ಮತ್ತು 3 ರವರು ಶಿವಕುಮಾರನನ್ನು ಒಂದು

ವಾಹನದಲ್ಲಿ ನಿಡುವಾಳೆ ಆಸ್ಪತ್ರೆಗೆ ಕರೆದುಕೊಂಡು ಹೋದರು, ನಂತರ ಚಾಸಾ.1 ರವರು ಕೂಲಿ ಲೈನಿಗೆ ಬಂದರು. ನಾನು ಅವರಿಗೆ ನಡೆದ ವಿಚಾರ ತಿಳಿಸಿದೆ ಎಂದು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

23. ನಂತರ ನಾನು ಚಾಸಾ.5 ರವರನ್ನು ವಿಚಾರಿಸಿದಾಗ, ಆರೋಪಿತರು ಮದ್ಯಾಹ್ನ 1.45 ಗಂಟೆಯಿಂದಲೂ ಶಿವಕುಮಾರನನ್ನು ಹುಡುಕುತ್ತಿದ್ದರು ಎಂದು ಹೇಳಿದರು, ಚಾಸಾ.5 ರವರನ್ನು ಮಗುವಿನ ಬಗ್ಗೆ ವಿಚಾರಿಸಿದಾಗ ಚಾಸಾ.5 ನನಗೆ ಗೊತ್ತಿಲ್ಲ ಎಂದು ತಿಳಿಸಿರುವುದಾಗಿ ನನಗೆ ಹೇಳಿದಳು, ಇದಾದ ಸ್ವಲ್ಪ ಸಮಯದಲ್ಲಿ 1 ನೇ ಆರೋಪಿ ದಿನೇಶ ಮಗುವನ್ನು ತೋಟದ ಕಡೆಯಿಂದ ಎತ್ತಿಕೊಂಡು ಬಂದ ತಿಳಿಸಿದಳು, ಮಗು ಎತ್ತಿಕೊಂಡು ಬರುವ ಸಮಯದಲ್ಲಿ ಮಲಮೂತ್ರ ವಿಸರ್ಜನೆ ಮಾಡಿಕೊಂಡಿರುವುದಾಗಿ ತಿಳಿಸಿದಳು, ಮಗುವನ್ನು 2 ನೇ ಆರೋಪಿ ಸ್ವಚ್ಚ ಗೋಳಿಸಿ ಬಟ್ಟೆ ಬದಲಾಯಿಸಿದ್ದಾಗಿ ತಿಳಿಸಿದಳು, ನಿಡುವಾಳೆ ಆಸ್ಪತ್ರೆಯಲ್ಲಿ ವೈಧ್ಯರು ಇಲ್ಲ ಎಂದು ತಿಳಿದುಬಂತು, ನಂತರ ನಾನು ಮತ್ತು ಮಾನೇಜರ್ ಬಳಸುವ ಜೀಪನ್ನು ಕೊಟ್ಟು ಮಗು ಶಿವಕುಮಾರರನ್ನು ಮೂಡಿಗೆರೆ ಆಸ್ಪತ್ರೆಗೆ ಕರೆದುಕೊಂಡು ಹೋದರು ಎಂದು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

24. ನಂತರ ಮಗು ಮರಣಹೊಂದಿದೆ ಎಂದು ಚಾಸಾ.1 ರವರು ನನಗೆ ತಿಳಿಸಿದರು, ನಾನು ನೋಡಿದಾಗ ಶಿವಕುಮಾರ ಮಾತನಾಡುವ ಸ್ಥಿತಿಯಲ್ಲಿರಲಿಲ್ಲ, ಪೋಲೀಸರು ತನಿಖೆಯಿಂದ 1 ನೇ ಆರೋಪಿ ಮಗುವಿನ ಕತ್ತು ಹಿಚುಕಿ ಸಾಯಿಸಿದ್ದಾನೆ

ಎಂದು ತಿಳಿದುಬಂತು ಎಂದು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

<u>ಮರುವಿಚಾರಣೆಃ ಇಲ್ಲ</u>

(ನನ್ನ ಉಕ್ತಲೇಖನಕ್ಕೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯ್ತು)

ಓ.ಹೇ.ಕೇ.ಸ.ಇ.ಎ.ಒ.

ಸಹಿ/-
2 ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ಚಿಕ್ಕಮಗಳೂರು.

ಸಾಕ್ಷಿಯ ಸಹಿ